RNU AIR DHARWAD

# NOVEMBER 24,2024
# ALL INDIA RADIO- DHARWAD
# PRADESH SAMACHARA (KANNADA) 12PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಯುವ ವಿಚಾರಗಳ ಮಹಾಕುಂಭ, 'ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್' ಬರುವ, 2025ರ ಜನವರಿ 11 ಮತ್ತು 12 ರಂದು, ಹೊಸ ದಿಲ್ಲಿಯ ಭಾರತ ಮಂಟಪದಲ್ಲಿ ಜರುಗಲಿದ್ದು, ಕೋಟ್ಯಂತರ ಯುವಜನ ಭಾಗವಹಿಸಲಿದ್ದಾರೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಆಕಾಶವಾಣಿಯ, ಜನಪ್ರಿಯ, 116 ನೇ ಅವೃತ್ತಿಯ, ಮನದ ಮಾತಿನಲ್ಲಿ, ಅವರು ಇಂದು ಬೆಳಗ್ಗೆ 11 ಗಂಟೆಗೆ, ದೇಶ–ವಿದೇಶಗಳ ಭಾರತೀಯರನ್ನು ಉದ್ದೇಶಿಸಿ, ಮಾತನಾಡಿದರು. ನ್ಯಾಶನಲ್ ಕೆಡೆಟ್ ಕಾರ್ಪ್ಸ್ – ಎನ್.ಸಿ.ಸಿ. ಬಗ್ಗೆ, 'ಮನ್ ಕಿ ಬಾತ್'ನಲ್ಲಿ, ವಿಶೇಷವಾಗಿ ಉಲ್ಲೇಖಿಸಿದ ಪ್ರಧಾನಮಂತ್ರಿಯವರು, ಇಂದು ದೇಶಾದ್ಯಂತ ಎನ್.ಸಿ.ಸಿ. ಸ್ವಯಂಸೇವಕರು, ವಿಶೇಷವಾಗಿ ಎನ್.ಸಿ.ಸಿ. ದಿನವನ್ನು, 'ಒಗ್ಗಟ್ಟು ಮತ್ತು ಶಿಸ್ತು' ಎಂಬ ಧ್ಯೇಯದೊಂದಿಗೆ ಆಚರಿಸಲಿದ್ದಾರೆ. ತಾವೂ ಸಹ ವಿದ್ಯಾರ್ಥಿಯಾಗಿದ್ದಾಗ, ಎನ್.ಸಿ.ಸಿ. ಕೆಡೆಟ್ ಆಗಿದ್ದನ್ನು, ಅಭಿಮಾನದಿಂದ ಸ್ಮರಿಸಿದ ಅವರು, ಪ್ರಸಕ್ತ ವರ್ಷ 20 ಲಕ್ಷ ಯುವ ಜನ, ಶಾಲೆ–ಕಾಲೇಜುಗಳಲ್ಲಿ ಎನ್.ಸಿ.ಸಿ. ಸೇರಿದ್ದಾರೆ. ಮಹಿಳಾ ಕೆಡೆಟ್‌ಗಳ ಸಂಖ್ಯೆ ಶೇಕಡ 40ಕ್ಕೆ ಏರಿರುವುದು, ಸಂತಸದ ವಿಷಯ ಎಂದರು. ನಗರೀಕರಣದ ಹಿನ್ನೆಲೆ, ದೂರವಾಗುತ್ತಿರುವ ಗುಬ್ಬಚ್ಚಿಗಳ ಬಗ್ಗೆ ಉಲ್ಲೇಖಿಸಿದ ಪ್ರಧಾನಮಂತ್ರಿ, ಮೈಸೂರಿನ 'ಇ–ಬರ್ಡ್ ಸಂಸ್ಥೆ', ಮಕ್ಕಳಿಗಾಗಿ ಆರಂಭಿಸಿರುವ 'ಅರ್ಲಿ ಬರ್ಡ್' ಅಭಿಯಾನದ ಬಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಗುಬ್ಬಿಗಳನ್ನು ಮರಳಿ ನಮ್ಮ ಮನೆ ಅಂಗಳಕ್ಕೆ ಕರೆತರುವ ಬಗ್ಗೆ ಆಲೋಚಿಸುವಂತೆ, ಮಕ್ಕಳಿಗೆ ಪಕ್ಷಿ ವೀಕ್ಷಕರಾಗುವಂತೆ, ಅವರು ಪ್ರೇರಣೆ ನೀಡಿದರು.**

<><><>

**ಗದಗ ಜಿಲ್ಲೆ ಲಕ್ಕುಂಡಿಯ, ಐತಿಹಾಸಿಕ ಗತವೈಭವವನ್ನು ಪುನರುಜ್ಜೀವಿತ ಗೊಳಿಸಿ, ಶ್ರೀಮಂತ ಪರಂಪರೆ ಬಗ್ಗೆ ಯುವಜನರಿಗೆ ತಿಳಿಸಲು, ಪ್ರವಾಸೋದ್ಯಮ ಇಲಾಖೆ, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಜೊತೆಗೂಡಿ, ಪ್ರಾಚ್ಯಾವಶೇಷಗಳ ಅನ್ವೇಷಣೆ ಇಂದಿನಿಂದ ಆರಂಭವಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಲಕ್ಕುಂಡಿಯ ಇತಿಹಾಸ, ಪರಂಪರೆಯ ಶ್ರೀಮಂತಿಕೆ ಕುರಿತು, ಎಚ್.ಕೆ ಪಾಟೀಲ ಅವರು, ಪ್ರಾಚ್ಯಾವಶೇಷಗಳ ಸಂಗ್ರಹಣೆ ಮಹತ್ವದ ಕುರಿತು ಬರೆದ ಪತ್ರವನ್ನು, ಜಿಲ್ಲಾಡಳಿತದ ಅಧಿಕಾರಿಗಳು, ಲಕ್ಕುಂಡಿಯ ಪ್ರತಿ ಮನೆಗೂ ತಲುಪಿಸಿದ್ದಾರೆ. ಜನರಿಂದ ಸಿಗುವ ಐತಿಹಾಸಿಕ ಮಹತ್ವದ ವಸ್ತುಗಳ ಸಂಗ್ರಹಕ್ಕೆ, ಪಲ್ಲಕ್ಕಿ ಸಿದ್ಧವಾಗಿದೆ.**

<><><>

ಧಾರವಾಡದ ಸವದತ್ತಿ ರಸ್ತೆಯ, ಕಸಾಯಿಖಾನೆ ಪಕ್ಕದ, ಥ್ಯಾಕರೆ ಹಾಗೂ ಅವನ ಸಹಚರರ ಸಮಾಧಿಗಳಿರುವ ಪ್ರದೇಶ ಸೇರಿದಂತೆ, ಜಿಲ್ಲಾ ಆಸ್ಪತ್ರೆ, ಹೊಸಯಲ್ಲಾಪುರದ ಮಹಾನಗರ ಪಾಲಿಕೆ ತ್ಯಾಜ್ಯ ವಿಲೇವಾರಿ ಘಟಕ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿರುವ, ಸಮಾಜ ಕಲ್ಯಾಣ ಇಲಾಖೆಯ, ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಸತಿ ನಿಲಯಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಫಣೀಂದ್ರ, ಅವ್ಯವಸ್ಥೆ ಸರಿ ಪಡಿಸಿ, ತಮಗೆ ವರದಿ ಸಲ್ಲಿಸುವಂತೆ, ಅಧಿಕಾರಿಗಳಿಗೆ ನಿರ್ದೇಶಿಸಿದರು.

<><><>

ಬೆಳಗಾವಿಯ ಸುವರ್ಣಸೌಧದಲ್ಲಿ ಬರುವ ಡಿಸೆಂಬರ್ 9 ರಿಂದ, ವಿಧಾನಮಂಡಲ ಚಳಿಗಾಲದ ಅಧಿವೇಶನ ಆರಂಭವಾಗಲಿದೆ. ಅಧಿವೇಶನದ ಪೂರ್ವಸಿದ್ಧತೆಗಾಗಿ, ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಉಪ ಸಮಿತಿಗಳ ಅಧ್ಯಕ್ಷರು ಹಾಗೂ ಅಧಿಕಾರಿಗಳ ಸಭೆ ನಡೆಸಿದರು. ಸುವರ್ಣ ಸೌಧದ ಮುಖ್ಯ ಪ್ರವೇಶ ದ್ವಾರದಿಂದ, ಒಳಗಡೆ ಆವರಣದ ವರೆಗೆ, ಪೂರ್ವಾನುಮತಿ ಹೊಂದಿರುವ, ಸಾರ್ವಜನಿಕರ ಪ್ರಯಾಣಕ್ಕೆ, ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದು, ಜಿಲ್ಲಾಧಿಕಾರಿ ಮೊಹಮ್ಮದ್ ರೋ ’ನ್, ಸಭೆಗೆ ತಿಳಿಸಿದರು. ಸಾವಿರ ಪೊಲೀಸರು, ಅಧಿವೇಶನಕ್ಕೆ ಭದ್ರತೆ ಒದಗಿಸಲಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾ ಶಂಕರ ಗುಳೇದ ಮಾಹಿತಿ ನೀಡಿದರು.

<><><>

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು, ಜಯಭೇರಿ ಬಾರಿಸಿದ್ದಾರೆ ಎನ್ನಲು ಖುಷಿಯಿದೆ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಅವಿರತ ಶ್ರಮದ ಗೆಲುವಾಗಿದೆ; ಈ ಗೆಲುವು ಹೊಸ ಸ್ಫೂರ್ತಿ ತುಂಬಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ಸಂತಸ ವ್ಯಕ್ತ ಪಡಿಸಿದ್ದಾರೆ. ಉಪ ಚುನಾವಣೆ ಫಲಿತಾಂಶ, 2028 ರ ವಿಧಾನಸಭಾ ಚುನಾವಣೆಯ ದಿಕ್ಸೂಚಿ ಎಂದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ವಿಧಾನಸಭಾ ಉಪಚುನಾವಣೆಯಲ್ಲಿ, ಮೂರು ಕ್ಷೇತ್ರಗಳ ಸೋಲಿನಿಂದ ನಿರಾಸೆಯಾಗಿದೆ. ಶಿಗ್ಗಾಂವ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸೋಲು ಆಘಾತ ತಂದಿದೆ ಎಂದು, ಬಿ.ಜೆ.ಪಿ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿ ಪಕ್ಷದ ವೇದಿಕೆಯಲ್ಲಿ, ಸೋಲಿನ ಪರಾಮರ್ಶೆ ನಡೆಸುವುದಾಗಿ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಮತದಾರರ ತೀರ್ಮಾನಕ್ಕೆ ತಾವು ತಲೆಬಾಗಿದ್ದು, ಜನತೆಯ ಹಿತಕಾಯುವ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಾಗಿ, ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ, ತಿಳಿಸಿದ್ದಾರೆ.

<><><>

‘ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನ’ದ ಹಿನ್ನೆಲೆ, ಭದ್ರಾವತಿ ಆಕಾಶವಾಣಿ ಕೇಂದ್ರ ರೂಪಿಸಿದ, ಖ್ಯಾತ ಮನೋಆರೋಗ್ಯ ವೈದ್ಯೆ, ಡಾಕ್ಟರ್ ಕೆ.ಎಸ್.ಪವಿತ್ರಾ ಅವರ ಭಾಷಣ, ಇಂದು ಮಧ್ಯಾಹ್ನ 1.20ಕ್ಕೆ ರಾಜ್ಯವ್ಯಾಪಿ ಪ್ರಸಾರವಾಗಲಿದೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯ, ಸಮುದಾಯ ಗೃಹ ವಿಜ್ಞಾನ ಮಹಾವಿದ್ಯಾಲಯದ ನೇತೃತ್ವದಲ್ಲಿ ಆಯೋಜಿಸಿದ, 33ನೇ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವಕ್ಕೆ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಆಕಾಶವಾಣಿಯ ವಿಶ್ರಾಂತ ಉಪ ಮಹಾನಿರ್ದೇಶಕ ಚೇತನ್‌ಕುಮಾರ ನಾಯಕ್ ಚಾಲನೆ ನೀಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>